

# ಬೆಟ್ಟದ ಹಣೆಯ ಮೋಹಕ ಕಾಡು ಮಾಥೆರನ್

ಇಲ್ಲಿ ಬೈಕ್‌ಗಳ ಸದ್ದಿಲ್ಲ, ಕಾರು – ಜೀಪುಗಳ ಭರಾಟೆ ಇಲ್ಲ! ಹೊಗೆ ಬಿಡುವ ವಾಹನಗಳಿರಲಿ, ಸೈಕಲ್‌ಗಳನ್ನೂ ಇಲ್ಲಿ ನೋಡಲು ಸಾಧ್ಯವಿಲ್ಲ! ವಾಹನಗಳ ಪ್ರವೇಶವನ್ನು ಸಂಪೂರ್ಣವಾಗಿ ನಿಷೇಧಿಸಿರುವ ಏಷ್ಯಾದ ಏಕೈಕ ಗಿರಿಧಾಮವಿದು. ಭಾರತದ ಪರಿಸರ ಮಾಲಿನ್ಯರಹಿತ ಗಿರಿಧಾಮಗಳಲ್ಲಿ ಅಗ್ರ ಶ್ರೇಯಾಂಕಧಾರಿ ಎಂಬ ಖ್ಯಾತಿಯ ಮಹಾರಾಷ್ಟ್ರದ ಮಾಥೆರನ್ ಗಿರಿಧಾಮ.

ಮಾಯಾನಗರಿ ಮುಂಬೈನಿಂದ ಕೇವಲ 90 ಕಿ.ಮೀ ಹಾಗೂ ಪುಣೆಯಿಂದ 120 ಕಿ.ಮೀ ದೂರದಲ್ಲಿ ಸಹ್ಯಾದ್ರಿ ಗಿರಿಶ್ರೇಣಿಯ ಮಡಿಲಲ್ಲಿದೆ ಈ ಮಾಥೆರನ್. ಮಾಥೆರನ್ ಅಂದರೆ ಮರಾಠಿಯಲ್ಲಿ ಬೆಟ್ಟದ ಹಣೆಯಲ್ಲಿರುವ ಕಾಡು ಎಂದರ್ಥ. ಇಲ್ಲಿನ ಇನ್ನೊಂದು ವಿಶೇಷವೆಂದರೆ ಬೆಟ್ಟದ ಮೇಲೆ ಚಲಿಸುವ ಪುಟಾಣಿ ರೈಲು. ಭಾರತದಲ್ಲಿರುವ ಆರು ಗಿರಿ ರೈಲು ಮಾರ್ಗಗಳಲ್ಲಿ ಮಾಥೆರನ್ ರೈಲುಮಾರ್ಗ ಕೂಡ ಒಂದು.

ಮಾಥೆರನ್‌ನಲ್ಲಿ ಓಡಾಡುವ ಏಕೈಕ ವಾಹನವೆಂದರೆ ಈ ಚುಕುಬುಕು ರೈಲು. ಇದು 21 ಕಿ.ಮೀ ಉದ್ದದ ಮಾರ್ಗದಲ್ಲಿ ಚಲಿಸಿ ಬೆಟ್ಟದ ಕೆಳಗಿರುವ ನೆರಲ್ ಮತ್ತು ಮಾಥೆರನ್ ನಡುವೆ ಸಂಪರ್ಕ ಕಲ್ಪಿಸುತ್ತದೆ. ಬೆಟ್ಟದ ಮಧ್ಯೆ ಹಾವಿನಂತೆ ಸಂಚರಿಸುವ ಈ ರೈಲು ಮಾರ್ಗ 1907ರಲ್ಲಿ ಅದಂಜೀ ಪೀರ್ ಭಾಯ್ ಎಂಬವರಿಂದ ನಿರ್ಮಾಣವಾಯಿತು. ಈ ಸುಂದರ ರೈಲು ಮಾರ್ಗದ ವಾಸ್ತುಶಿಲ್ಪಿ ಎವೆರಾರ್ಡ್ ಕಾಲ್‌ಥ್ರೋಪ್ ಎಂಬ ಬ್ರಿಟಿಷ್ ಅಧಿಕಾರಿ.

ಸಮುದ್ರ ಮಟ್ಟದಿಂದ ಸುಮಾರು 2600 ಅಡಿ ಎತ್ತರದಲ್ಲಿರುವ ಈ ಗಿರಿಧಾಮವನ್ನು ತಲುಪಲು ವಾಹನ ನಿಲುಗಡೆಯ ಸ್ಥಳದಿಂದ ಕುದುರೆ, ಡೋಲಿ, ರೈಲು ಅಥವಾ ಕಾಲ್ನಡಿಗೆಯಲ್ಲಿ ಸುಮಾರು ನಾಲ್ಕು ಕಿ.ಮೀ ಹೋಗಬೇಕು. ಬೆಟ್ಟದ ನೆತ್ತಿಯಲ್ಲಿ ಎಲ್ಲಾ

